# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 717 |
| ಸದಸ್ಯರ ಹೆಸರು | : ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 22.02.2022 |
| ಉತ್ತರಿಸುವವರು | : ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಐದು ವರ್ಷಗಳಿಂದ ವಸೂಲಿಯಾಗಿರುವ ಅದಿರಿನ ಮೇಲಿನ ಸೆಸ್ ಎಷ್ಟು;<br><br>(ಜಿಲ್ಲಾವಾರು ವಿವರ ನೀಡುವುದು) | ಇಲಾಖೆಯಲ್ಲಿ ಅದಿರಿನ ಮೇಲೆ ಯಾವುದೇ ಸೆಸ್ ಸಂಗ್ರಹಿಸುತ್ತಿಲ್ಲ.<br><br>ಅದಾಗ್ಯೂ, ಎಂ.ಎಂ.ಡಿ.ಆರ್-ತಿದ್ದುಪಡಿ ಕಾಯ್ದೆ-2015 ದಿನಾಂಕ:12.01.2015 ಮತ್ತು ಕೆ.ಎಂ.ಎಂ.ಸಿ.ಆರ್ ತಿದ್ದುಪಡಿ ನಿಯಮ-2016 ದಿನಾಂಕ:12.08.2016 ರನ್ವಯ ಹರಾಜು ರಹಿತ ಮಂಜೂರು ಮಾಡಲಾದ ಗಣಿ/ಕಲ್ಲುಗಣಿ ಗುತ್ತಿಗೆದಾರರಿಂದ ರಾಜಧನದ ಶೇ.30 ಹಾಗೂ ಹರಾಜು ಮೂಲಕ ಮಂಜೂರು ಮಾಡಲಾದ ಗಣಿ/ಕಲ್ಲುಗಣಿ ಗುತ್ತಿಗೆದಾರರಿಂದ ರಾಜಧನದ ಶೇ.10 ರಷ್ಟು ಮೊತ್ತವನ್ನು ವಂತಿಕೆಯಾಗಿ ಸಂಗ್ರಹಿಸಲಾಗುತ್ತಿದೆ.<br><br>ರಾಜ್ಯದಲ್ಲಿ 2015-16 ರಿಂದ 2021-22 (ಜನವರಿ-2021) ಅಂತ್ಯದವರೆಗೆ ಒಟ್ಟು ರೂ. 3159.04 ಕೋಟಿ ಸಂಗ್ರಹಿಸಿದ್ದು, ಜಿಲ್ಲಾವಾರು ವಿವರ ಅನುಬಂಧದಲ್ಲಿ ಪೂರೈಸಿದೆ. |
| ಆ) | ಈ ಹಣವನ್ನು ಯಾವ ಯೋಜನೆಗಳಿಗೆ ಖರ್ಚು ಮಾಡುವ ಅವಕಾಶ ಇದೆ;<br><br>(ಮಾಹಿತಿ ನೀಡುವುದು) | DMFT-2016 ರ ನಿಯಮ 18(2) ರಂತೆ ಡಿಎಂಎಫ್ ನಿಧಿಯಲ್ಲಿ ಸಂಗ್ರಹಿಸಿದ ಒಟ್ಟು ಮೊತ್ತದಲ್ಲಿ ಶೇ.10 ರಷ್ಟು ಮೊತ್ತವನ್ನು ಎಂಡೋಮೆಂಟ್ ಗಾಗಿ ಹಾಗೂ ಶೇ.5 ರಷ್ಟು ಮೊತ್ತವನ್ನು ಆಡಳಿತಾತ್ಮಕ ವೆಚ್ಚಕ್ಕಾಗಿ ಉಳಿದ ಶೇ.85 ರಷ್ಟು ಮೊತ್ತದಲ್ಲಿ 60:40 ಅನುಪಾತದಂತೆ ಗಣಿ ಬಾಧಿತ ಪ್ರದೇಶಗಳಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುವುದು ಮುಖ್ಯ ಉದ್ದೇಶವಾಗಿರುತ್ತದೆ.<br>**ಶೇಕಡ 60ರ ಅನುಪಾತದಲ್ಲಿ ಆಯೋಜಿಸುವ ಕಾರ್ಯಕ್ರಮಗಳು:**<br>1) ಕುಡಿಯುವ ನೀರು<br>2) ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣದ ಅಳತೆ<br>3) ಆರೋಗ್ಯ<br>4) ಶಿಕ್ಷಣ<br>5) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಬಂಧ ಕಾರ್ಯಕ್ರಮ<br>6) ಹಿರಿಯ ನಾಗರೀಕ ಮತ್ತು ವಿಕಲಚೇತನ ಕಲ್ಯಾಣ<br>7) ಕೌಶಲ್ಯ ಅಭಿವೃದ್ಧಿ<br>8) ನೈರ್ಮಲ್ಯತೆ<br>**ಶೇಕಡ 40ರ ಅನುಪಾತದಲ್ಲಿ ಆಯೋಜಿಸುವ ಕಾರ್ಯಕ್ರಮಗಳು:**<br>1) ಭೌತಿಕ ಮೂಲಸೌಕರ್ಯ<br>2) ನೀರಾವರಿ<br>3) ಇಂಧನ ಮತ್ತು ನೀರಾವರಿ ಅಭಿವೃದ್ಧಿ<br>4) ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರದ ಗುಣಮಟ್ಟ ಹೆಚ್ಚಿಸುವುದು |

| | | |
|---|---|---|
| | | ಮುಂದುವರಿದು, ಕೇಂದ್ರ ಸರ್ಕಾರದ ಆದೇಶ ದಿನಾಂಕ:28.02.2020 ಮತ್ತು 25.08.2021 ರಂತೆ ಡಿಎಂಎಫ್ ಅಡಿಯಲ್ಲಿ ದಿನಾಂಕ:31.03.2020 ಮತ್ತು 31.03.2021 ಕ್ರಮವಾಗಿ ಬಾಕಿ ಇರುವ ಮೊತ್ತದ 30% ಮೊತ್ತವನ್ನು Covid-19 ವೈರಾಣು ತಡೆಗಟ್ಟಲು ಮೊತ್ತವನ್ನು ಉಪಯೋಗಿಸಲು ಆದೇಶಿಸಿರುತ್ತದೆ. |
| ಇ) | ಇದರಲ್ಲಿ ಖರ್ಚಾದ ಹಾಗೂ ಬಾಕಿ ಇರುವ ಅನುದಾನ ಎಷ್ಟು; (ಮಾಹಿತಿ ನೀಡುವುದು) | ಸಂಬಂಧಿಸಿದ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಲ್ಲಿ ಸಂಗ್ರಹಿಸುವ ಒಟ್ಟು ಮೊತ್ತದಲ್ಲಿ ಖರ್ಚಾದ ಹಾಗೂ ಉಳಿದಿರುವ ಮೊತ್ತದ ವಿವರ ಅನುಬಂಧದಲ್ಲಿ ಪೂರೈಸಿದೆ |
| ಈ) | ಉಳಿದಿರುವ ಹಣ ಖರ್ಚು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು) | ಡಿಎಂಎಫ್ ಮೊತ್ತದ ಖರ್ಚಿನಲ್ಲಿ ಪ್ರಗತಿ ಸಾಧಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಹಾಗೂ ಜಿಲ್ಲಾ ಉನ್ನತಾಧಿಕಾರಸ್ಥ ಸಮಿತಿ ಸಭೆಯಲ್ಲಿ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ (PMKKKY) ಯೋಜನೆಗಳನ್ನು ಕೈಗೊಳ್ಳುವ ಸಂಬಂಧಪಟ್ಟ ಇಲಾಖೆಗಳ ಸರ್ಕಾರದ ಅಪರ ಕಾರ್ಯದರ್ಶಿರವರೊಂದಿಗೆ ಸಭೆ ನಡೆಸಿ ಡಿಎಂಎಫ್ ಪ್ರಗತಿ ಪರಿಶೀಲನೆ ನಡೆಸಲಾಗುತ್ತದೆ.<br><br>ಸರ್ಕಾರದ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಗಣಿ ಮತ್ತು ಭೂವಿಜ್ಞಾನ ಇಲಾಖೆರವರು 31 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಉಪ ನಿರ್ದೇಶಕರು/ ಹಿರಿಯ ಭೂವಿಜ್ಞಾನಿರವರೊಂದಿಗೆ ಮಾಸಿಕ ಸಭೆಗಳನ್ನು ನಡೆಸಿ ಸಂಬಂಧಿಸಿದ ಜಿಲ್ಲೆಯಲ್ಲಿ ರೂಪಿಸಲಾಗುವ ಕಾರ್ಯಕ್ರಮಗಳಿಗೆ ಆದ್ಯತೆ ಮೇರೆಗೆ ಪ್ರಗತಿಯನ್ನು ಸಾಧಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ. ಅದರಂತೆ ಡಿಎಂಎಫ್ ಅಡಿಯಲ್ಲಿ ಒಟ್ಟು 8952 ಕಾಮಗಾರಿಗಳನ್ನು ಕೈಗೊಂಡಿದ್ದು, ಈವರೆಗೆ 3074 ಕಾಮಗಾರಿಗಳು ಯಶಸ್ವಿಯಾಗಿ ಪೂರ್ಣಗೊಂಡಿರುತ್ತವೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ಸಿಐ 37 ಎಂಎಂಎಂ 2022**

Halappa

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ
ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

ಅನುಬಂಧ

# ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಲ್ಲಿ ಸಂಗ್ರಹಿಸಿದ ಹಾಗೂ ಉಳಿದಿರುವ ಮೊತ್ತದ ವಿವರ

ರೂ.ಲಕ್ಷಗಳಲ್ಲಿ

| ಕ್ರ.ಸಂ | ಜಿಲ್ಲೆ | ಡಿಎಂಎಫ್ ಸಂಗ್ರಹಣೆ 2015-16 to ಜನವರಿ 2022 | 85% ಡಿಎಂಎಫ್ ಮೊತ್ತ (ಎಂಡೋಮೆಂಟ್ ಮತ್ತು ಆಡಳಿತಾತ್ಮಕ ವೆಚ್ಚ ಹೊರತುಪಡಿಸಿ ) | ಅನುಮೋದಿತ ಕ್ರಿಯಾ ಯೋಜನೆ ಮೊತ್ತ | PMKKKY ಯೋಜನೆಗಳಿಗೆ ಖರ್ಚಾದ ಮೊತ್ತ | ಕೋವಿಡ್-19 ವೈರಾಣು ತಡೆಗಟ್ಟಲು ಖರ್ಚಾದ ಮೊತ್ತ | ಒಟ್ಟು ಖರ್ಚಾದ ಮೊತ್ತ | ಬಾಕಿ ಮೊತ್ತ (D-H) |
|---|---|---|---|---|---|---|---|---|
| A | B | C | D | E | F | G | H | I |
| 1 | Ballari | 188586.69 | 160298.68 | 222215.51 | 57780.64 | 5129.95 | 62910.59 | 97388.09 |
| 2 | Kalaburagi | 40963.32 | 34818.82 | 54084.41 | 9542.23 | 5950.88 | 15493.11 | 19325.71 |
| 3 | Chitradurga | 31413.79 | 26701.72 | 30639.65 | 13529.15 | 3368.44 | 16897.59 | 9804.13 |
| 4 | Bagalkot | 8624.36 | 7330.70 | 11410.20 | 4962.43 | 386.40 | 5348.83 | 1981.88 |
| 5 | Koppal | 5631.69 | 4786.94 | 8890.92 | 3753.84 | 543.00 | 4296.84 | 490.10 |
| 6 | Raichur | 4542.92 | 3861.48 | 7023.41 | 3065.35 | 386.09 | 3451.44 | 410.04 |
| 7 | Chikkaballapura | 4329.56 | 3680.12 | 7803.11 | 1216.81 | 404.61 | 1621.42 | 2058.70 |
| 8 | Ramanagara | 4152.22 | 3529.39 | 2750.17 | 2037.10 | 555.23 | 2592.33 | 937.06 |
| 9 | Bangalore Urban | 3952.65 | 3359.75 | 6354.13 | 2268.60 | 260.69 | 2529.29 | 830.47 |
| 10 | Tumkur | 3719.50 | 3161.57 | 4995.63 | 2077.28 | 464.08 | 2541.36 | 620.21 |
| 11 | Belgaum | 3167.00 | 2691.95 | 1806.68 | 1614.09 | 297.58 | 1911.67 | 780.28 |
| 12 | Bangalore Rural | 3013.43 | 2561.41 | 2484.69 | 934.24 | 262.78 | 1197.02 | 1364.40 |
| 13 | Chamarajanagar | 2550.88 | 2168.25 | 2359.86 | 566.24 | 297.06 | 863.30 | 1304.95 |
| 14 | Hassan | 1462.52 | 1243.14 | 918.10 | 742.82 | 15.00 | 757.82 | 485.32 |
| 15 | Uttara Kannada | 1231.22 | 1046.54 | 761.65 | 680.99 | 44.00 | 724.99 | 321.55 |
| 16 | Kolar | 1024.85 | 871.12 | 592.55 | 262.92 | 76.08 | 339.00 | 532.12 |
| 17 | Dakshina Kannada | 1023.24 | 869.75 | 165.50 | 135.57 | 152.00 | 287.57 | 582.18 |
| 18 | Chikkamagaluru | 1001.69 | 851.44 | 665.24 | 502.15 | 0.00 | 502.15 | 349.29 |
| 19 | Udupi | 982.18 | 834.85 | 450.03 | 429.87 | 119.28 | 549.15 | 285.70 |
| 20 | Gadag | 745.47 | 633.65 | 494.32 | 259.30 | 60.00 | 319.30 | 314.35 |
| 21 | Dharwad | 710.20 | 603.67 | 265.40 | 75.74 | 99.84 | 175.58 | 428.09 |
| 22 | Haveri | 609.17 | 517.80 | 788.03 | 169.60 | 93.71 | 263.31 | 254.49 |
| 23 | Mandya | 594.54 | 505.36 | 345.50 | 174.50 | 24.03 | 198.53 | 306.83 |
| 24 | Davanagere | 535.07 | 454.81 | 532.43 | 439.78 | 16.23 | 456.01 | -1.20 |
| 25 | Vijayapura | 485.16 | 412.38 | 450.26 | 173.73 | 54.50 | 228.23 | 184.15 |
| 26 | Shivamogga | 253.21 | 215.23 | 56.95 | 28.38 | 39.45 | 67.83 | 147.40 |
| 27 | Mysuru | 215.37 | 183.06 | 177.19 | 9.44 | 22.86 | 32.30 | 150.76 |
| 28 | Bidar | 130.24 | 110.70 | 47.72 | 0.00 | 10.08 | 10.08 | 100.62 |
| 29 | Kodagu | 133.77 | 113.70 | 14.50 | 0.00 | 19.96 | 19.96 | 93.74 |
| 30 | Yadgir | 118.56 | 100.77 | 36.97 | 31.31 | 0.00 | 31.31 | 69.46 |
| | Grand Total | 315904.44 | 268518.77 | 369580.70 | 107464.08 | 19153.81 | 126617.90 | 141900.87 |

H Ulz

ಉಪ ನಿರ್ದೇಶಕರು